**( ದಿನಾಂಕ: 21-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ವಾಟೀ ಸವಾಲುಃ** ಶ್ರೀ S.S.C ವಕೀಲರಿಂದ,

ನನ್ನ ತಂದೆ ಚಂದಪ್ಪ ತೀರಿಕೊಂಡು ಸುಮಾರು 15-16 ವರ್ಷ ಆಗಿರುತ್ತದೆ. ನಾವು 2 ಜನ ಅಣ್ಣ-ತಮ್ಮದಂದಿರು, 4 ಜನ ಅಕ್ಕ - ತಂಗಿಯರು ಇರುತ್ತವೆ. 3 ನೇ ಪ್ರತಿವಾದಿ ಗಂಡ ಶರಣಪ್ಪ ನನ್ನ ಅಣ್ಣ ಅತ ತೀರಿಕೊಂಡು ಇರುತ್ತಾನೆ. ಆತ ತೀರಿಕೊಂಡು 8-10 ವರ್ಷ ಅಗಿರುತ್ತದೆ. ನನ್ನ ಅಣ್ಣ ಮತ್ತು ನನ್ನ ತಂದೆ ತೇರಿಕೊಂಡ ಬಗ್ಗೆ ದಾಖಲೆಯನ್ನು ಕೊಟ್ಟಿಲ್ಲ. ದಾವಾ ಸ್ವತ್ತುಗಳ ಸರ್ವೇ ನಂ ನನಗೆ ಗೊತ್ತಿಲ್ಲ, ಅದರೆ ಅದು 5 ವರೆ ಎಕರೆ ಜಮೀನು ಇರುತ್ತದೆ. ದಾವಾ ಸ್ವತ್ತುಗಳು ಹಿರಿಯರ ಆಸ್ತಿ ಅವು ನಮ್ಮ ತಂದೆಗೆ ನಮ್ಮ ಅಜ್ಜನಿಂದ ಬಂದಿರುತ್ತವೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುತ್ತೇನೆ.

1 ನೇ ಪ್ರತಿವಾದಿ ನನ್ನ ತಾಯಿ ಅವಳು 2 ನೇ ವಾದಿ ಹತ್ತಿರ ಇರುತ್ತಾಳೆ ಎಂದರೆ, ಸಾಕ್ಷಿ ಎಲ್ಲರ ಬಳಿಯು ಇರುತ್ತಾಳೆ ಎಂದು ನುಡಿಯುತ್ತಾರೆ. ನನ್ನ ತಾಯಿ ಶಿರೂರುದ್ದಲ್ಲಿ ಇದ್ದಾಗ 2 ನೇ ಪ್ರತಿವಾದಿ ಅವಳನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಈ ದಾವೆ ಮಾಡು ಎಂದು ಹೇಳಿದ ಮೇರೆಗೆ, ನಾವು ಈ ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿ . ದಾವಾ ಸ್ವತ್ತುಗಳನ್ನು 2 ಮತ್ತು 3 ಪ್ರತಿವಾದಿಗಳು ಸಾಗುವಳಿ ಮಾಡುತ್ತಾರೆ ಎಂದರೆ, ಸಾಕ್ಷಿ 2 ನೇ ಪ್ರತಿವಾದಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಕಬ್ಜಯಲ್ಲಿ ನಾವುಗಳು ಇಲ್ಲ, 2 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿ .

2015-2016 ರಲ್ಲಿ ನನ್ನ ತಾಯಿ 1 ನೇ ಪ್ರತಿವಾದಿ ದಾವಾ ಸ್ವತ್ತುಗಳನ್ನು 2 ಮತ್ತು 3ನೇ ಪ್ರತಿವಾದಿಗಳಿಗೆ ಮೌಖಿಕವಾಗಿ ಹಂಚಿಕೆ ಮಾಡಿರುತ್ತಾರೇ ಎಂದರೆ ಸರಿಯಲ್ಲ. ಸದರಿ ಹಂಚಿಕೆಯಲ್ಲಿ ನಾವೆಲ್ಲ ಅಕ್ಕ ತಂಗಿಯರು ನಮಗೆ ಪಾಲು ಬೇಡ ಎಂದು ಹೇಳಿರುತ್ತೆವೆ ಎಂದರೆ ಸರಿಯಲ್ಲ. ನನ್ನ ತಾಯಿ 2 ಮತ್ತು 3 ನೇಪ್ರತಿವಾದಿಗಳಿಗೆ ತಲಾ 2 ಎಕರೆ ಜಮೀನನ್ನು ಹಂಚಿ ಕೊಟ್ಟಿರುತ್ತಾಳೇ ಎಂದರೆ ಸರಿಯಲ್ಲ. ಉಳಿದ 1 ವರೆ ಎಕರೆ ಜಮೀನು 1 ನೇ

**( ದಿನಾಂಕ: 21-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

ಪ್ರತಿವಾದಿಗೆ ಉಣ್ಣಲಿಕೆ ಬಿಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಾಯಿ ತನಗೆ ಬಂದ ಜಮೀನನ್ನು ಬಟಾಯಿ ಮೂಲಕ ಸಾಗುವಳಿ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಇಲ್ಲಿಯವರೆಗೂ ನನ್ನ ತಾಯಿಯನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೇ ಎಂದರೆ ಸರಿಯಲ್ಲ. ನನ್ನ ತಾಯಿ ಪಾಲಿಗೆ ಇಟ್ಟ 1 ವರೆ ಎಕರೆ ಜಮೀನಿನ ಎಲ್ಲ ಉತ್ಪನ್ನವನ್ನು ನಾವೆಲ್ಲ ಅಕ್ಕ ತಂಗಿಯರು ತೆಗೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಸಲ್ಲಿ ಈ ಮೊದಲೆ ಪಾಲು ಆಗಿದ್ದರು ಕೂಡ ನನ್ನ ತಾಯಿ ಮಾತನ್ನು ಕೇಳಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು, ಆಳಂದ**

**P.W-2**

**( ದಿನಾಂಕ: 21-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ S.S.C ವಕೀಲರಿಂದ,

ನನಗೆ 3 ಜನ ಗಂಡು ಮಕ್ಕಳು. ಅವರೆಂದರೆ, ಸಿದ್ದಪ್ಪ, ಸುರೇಶ ಮತ್ತು ಪ್ರಕಾಶ ಇರುತ್ತದೆ. ಅವರ ಪೈಕಿ ಸುರೇಶ ಶಾಲೆ ಕಲಿತಿರುತ್ತಾರೆ. ನನ್ನ ಮಗ ಸುರೇಶ ಹೇಳಿದ್ದರಿಂದ ಈ ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿ. ನನ್ನ ತಾಯಿಯನ್ನು ನಾವೇ ಕರೆದುಕೊಂಡು ಶಿರೂರುದಲ್ಲಿ ಇಟ್ಟಕೊಂಡಿರುತ್ತೇವೆ ಎಂದರೆ ಸರಿ. ನನ್ನ ತಾಯಿ ಶಿರೂರು ಗ್ರಾಮದಲ್ಲಿ ಇದ್ದಾಗ 2 ಮತ್ತು 3 ನೇಪ್ರತಿವಾದಿಗಳು ಅವಗಳನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ ಎಂದರೆ ಸರಿ , ಸಾಕ್ಷಿ ಮುಂದುವರೆದು 2 ವರ್ಷಗಳಿಂದ ನೋಡಿಕೊಂಡಿಲ್ಲ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು ತಲಾ ಅರ್ಧ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ, ನನ್ನ ತಾಯಿಗುಡ ಕೂಡ ಅವಳು ಉಣ್ಣಲಿಕೆ ಜಮೀನು ಇಟ್ಟಿದ್ದರು ಎಂದರೆ ಸರಿ, ಸಾಕ್ಷಿ ಮುಂದುವೆರೆದು 2-3 ನೇ ಪ್ರತಿವಾದಿಗಳು ನೋಡಿಕೊಳ್ಳುತ್ತಿದಾರೆ ಎಂದು ನುಡಿದಿದ್ದಾರೆ.

ನನ್ನ ತಾಯಿಗೆ ಕೊಟ್ಟಾಗ ಬಟಾಯಿ ಮೂಲಕ ಸಾಗುವಳಿಗೆ ಕೊಟ್ಟಿದ್ದರು ಎಂದರೆ ಸರಿ. ಬಟಾಯಿ ಮೂಲಕ ಬಂದ ಹಣವನ್ನು ನಾವೇ ತೆಗೆದುಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಸರ್ವೆ ನಂಬರ ನನಗೆ ಗೊತಿಲ್ಲ ಅದರೆ 5 ವರೆ ಎಕರೆ ಇರುತ್ತದೆ. ದಾವಾ ಸ್ವತ್ತುಗಳ ಚೆಕ್ ಬಂದಿ ನನಗೆ ಗೊತ್ತಿಲ್ಲ. ನನ್ನ ತಾಯಿ 2015-2016 ರಲ್ಲಿ 2-3 ನೇ ಪ್ರತಿವಾದಿಯರಿಗೆ ಮೌಖಿಕ ವಾಟ್ನಿ ಮಾಡಿಕೊಟ್ಟು ತಲಾ ಅರ್ಧ ಜಮೀನು ಹಂಚಿಕೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾವು ನಮಗೆ ಯಾವುದೇ ಆಸ್ತಿ ಬೇಡ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ.

2-3 ನೇ ಪ್ರತಿವಾದಿಗಳು ತಲಾ 2 ಎಕರೆ ಜಮೀನಿನಲ್ಲಿ 2016 ರಿಂದ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಾಯಿ ಹೇಳಿದ ಮೇರೆಗೆ ಈ ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. 2015-2016 ನೇ ಸಾಲಿನಲ್ಲಿ ಹಂಚಿಕೆಯಾಗಿದ್ದರು

**( ದಿನಾಂಕ: 21-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

ಗೊತ್ತಿದ್ದರೂ ಕೂಡ ಈ ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು, ಆಳಂದ**